ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯೊಂದೇ ಅಲ್ಲ, ದಯವಿಟ್ಟು ಎಷ್ಟು ಸ್ಟಾರ್ಡ್ ಪ್ರಶ್ನೆಗಳಿಗೆ ಉತ್ತರ ಬಂದಿದೆ, ಎಷ್ಟಕ್ಕೆ ಬಂದಿಲ್ಲ, ಎಷ್ಟು ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಕೊಟ್ಟಿದ್ದಾರೆಂಬುದನ್ನು ತಾವು ನೋಡಿ.

ಅಧ್ಯಕ್ಷರು : ಇವೆಲ್ಲಾ ಮಾಹಿತಿಯನ್ನು ಮಾನ್ಯ ಚಂದ್ರೇಗೌಡರಿಗೆ ಮೊನ್ನೆಯೇ ಕೊಟ್ಟಿದ್ದೇವೆ, ಮತ್ತೆ ಈಗ ಎರಡು-ಮೂರು ದಿವಸಗಳಿಂದ 15 ಪ್ರಶ್ನೆಗಳಿಗೂ ಉತ್ತರಗಳು ಬರುತ್ತಿವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, 3-4 ಸ್ಟಾರ್ಡ್ ಪ್ರಶ್ನೆಗಳಿಗೆ ಉತ್ತರಗಳೇ ಇರುವುದಿಲ್ಲ, ಈ ರೀತಿ ಆಗುವುದಾದರೆ ಸ್ಟಾರ್ಡ್ ಪ್ರಶ್ನೆಗಳನ್ನು ಏಕೆ ಕೇಳಬೇಕು? ಅದಕ್ಕೆ ಅರ್ಥ ಏನು ಇರುತ್ತದೆ? ಇದು ಶಾಸಕರ ಹಕ್ಕಿಗೆ ಚ್ಯುತಿ ಬಂದಹಾಗೆ ಆಗುತ್ತದೆ.

ಅಧ್ಯಕ್ಷರು : ಹಕ್ಕಿನ ಚ್ಯುತಿ ಅಂಥ ಅಲ್ಲ, ಅವರು ಎಲ್ಲವನ್ನೂ ಕಲೆಕ್ಟ್ ಮಾಡಬೇಕಲ್ಲಾ, ಸುಳ್ಳು ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಈಗ ಕಂಪ್ಯೂಟರೈಸ್ ಆಗಿದೆ, ಎಲ್ಲಾ ಮಾಹಿತಿಗಳು ಸಂಗ್ರಹವಾಗಿರುತ್ತದೆ.

Mr. Speaker : We will try to get the answer before Friday.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ತಾವು ಎಲ್ಲಾ ಸ್ಟ್ಯಾಟಿಸ್ಟಿಕ್ಸ್ ತೆಗೆದು ನೋಡಿ, ಎಷ್ಟು ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲವೆಂಬುದು, ಗೊತ್ತಾಗುತ್ತದೆ, ನೀವೇ ಸರ್ಕಾರಕ್ಕೆ ಛೀಮಾರಿ ಹಾಕುತ್ತೀರಿ.

ಅಧ್ಯಕ್ಷರು : ಅದೆಲ್ಲವನ್ನೂ ತೆಗೆದು ಆಗಿದೆ. ಅದೆಲ್ಲಾ ಮಾಹಿತಿಯನ್ನು ಮಾನ್ಯ ಡಿ.ಬಿ. ಚಂದ್ರೇಗೌಡರಿಗೆ ಕಳುಹಿಸಿ 15 ದಿವಸಗಳು ಆಗಿದೆ. ಪ್ರೀವಿಯಸ್ ಸೆಷನ್ ನಲ್ಲಿ ಎಷ್ಟು ಉತ್ತರವನ್ನು ಕೊಟ್ಟಿದ್ದಾರೆ, ಎಷ್ಟು ಪೆಂಡಿಂಗ್ ಇದೆ, ಕಾಲಿಂಗ್ ಅಟೆನ್ ಶನ್ ಪಾರ್ಟಿನೋಟಿಸ್ ಕ್ವೆಶ್ಚನ್ ಇವೆಲ್ಲವನ್ನೂ ಕಳುಹಿಸಿ ಆಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಏಕೆ ಇಷ್ಟು ನೆಗ್ಲಿಜೆನ್ಸ್? ಸರ್ಕಾರ ಇದನ್ನು ಏಕೆ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ? ಇದಕ್ಕೆ ಉತ್ತರವನ್ನು ತರಿಸಿಕೊಳ್ಳಬೇಕು, ಇಲಾಖೆಯವರಿಗೆ ಹೇಳಬೇಕೆಂಬ ಬಗ್ಗೆ ಗಂಭೀರವಾಗಿ ಗಣನೆಗೆ ತೆಗೆದುಕೊಳ್ಳುತ್ತಿಲ್ಲ.

ಅಧ್ಯಕ್ಷರು : ಆಯಿತು, ತಮಗೆ ಇದುವರೆಗೂ ಎಷ್ಟೆಷ್ಟು ಪ್ರಶ್ನೆಗಳಿಗೆ ಉತ್ತರ ಕೊಡಲಾಗಿದೆ, ಎಂಬ ಬಗ್ಗೆ ನಾಳೆ, ನಾಡಿದ್ದರಲ್ಲಿ ಮಾಹಿತಿ ಕೊಡುತ್ತೇನೆ.

ಇ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು (ಮುಂದು)

ಕೆರೆಸಿರಿ ಯೋಜನೆಯಲ್ಲಿ ಬೆಂಗಳೂರು ನಗರದ ಕೆರೆಗಳ ಅಭಿವೃದ್ಧಿ

586 (5058) : ಶ್ರೀ ಪಿ.ಸಿ. ಮೋಹನ್, (ಚಿಕ್ಕಪೇಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆರೆಸಿರಿ ಯೋಜನೆಯಲ್ಲಿ ಬೆಂಗಳೂರು ನಗರದ ಕೆರೆಗಳ ಅಭಿವೃದ್ಧಿ ಯೋಜನೆಯ ವಿವರಗಳೇನು?

ಆ) ಕೆರೆಸಿರಿ ಯೋಜನೆಗೆ ಮಾಡಿರುವ ವೆಚ್ಚ ಹಾಗೂ ಕಾರ್ಯಪ್ರಗತಿಗಳೇನು?

ಇ) ಅಲಸೂರು, ಸ್ಯಾಂಕಿ ಮತ್ತು ಯಡಿಯೂರು ಕೆರೆ ಅಭಿವೃದ್ಧಿ ಗುತ್ತಿಗೆಯನ್ನು ಯಾರಿಗೆ ನೀಡಲಾಗಿದೆ ಮತ್ತು ಈ ಗುತ್ತಿಗೆಯ ಹಣವೆಷ್ಟು? ಮತ್ತು ಈಗೇನಾದರೂ ಅಂದಾಜು ವೆಚ್ಚದಲ್ಲಿ ಬದಲಾವಣೆಯಾಗಿದೆಯೇ? ವಿವರ ಒದಗಿಸುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಈ ಕೆಳಕಂಡ ಕೆರೆಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ:

1. ಅಲಸೂರು ಕೆರೆ.
2. ಯಡಿಯೂರು ಕೆರೆ.
3. ಸ್ಯಾಂಕಿ ಕೆರೆ.

ಆ) ಈ ಕೆರೆಗಳ ಅಭಿವೃದ್ಧಿ ಯೋಜನೆಯಡಿ ಹೂಳೆತ್ತುವ ಕಾಮಗಾರಿಗೆ ಇಲ್ಲಿಯವರೆಗೆ ರೂ. 423.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಇತರೆ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಕಾರ್ಯಪ್ರಗತಿಯ ಬಗ್ಗೆ ವಿವರವನ್ನು ಪ್ರತ್ಯೇಕವಾಗಿ ಅನುಬಂಧದಲ್ಲಿ ನೀಡಲಾಗಿದೆ.

ಇ) ಅಲಸೂರು, ಸ್ಯಾಂಕಿ ಮತ್ತು ಯಡಿಯೂರು ಕೆರೆಗಳ ಅಭಿವೃದ್ಧಿ ಗುತ್ತಿಗೆಯನ್ನು ಮೆ: ಶ್ಯಾಮರಾಜು ಅಂಡ್ ಕಂಪೆನಿಯವರಿಗೆ ಟೆಂಡರು ಆಧಾರದ ಮೇಲೆ ವಹಿಸಲಾಗಿದೆ. ಗುತ್ತಿಗೆ ಮೊತ್ತರ ವಿವರಗಳು ಈ ಕೆಳಕಂಡತಿದೆ:

ಕ್ರ. ಸಂ.	ಕೆರೆ	ಯೋಜನೆಯ ಅಂದಾಜು ವೆಚ್ಚ	ಗುತ್ತಿಗೆ ಮೊತ್ತ
1.	ಅಲಸೂರು ಕೆರೆ	750.00 ಲಕ್ಷ	680.00 ಲಕ್ಷ
2.	ಯಡಿಯೂರು ಕೆರೆ	325.00 ಲಕ್ಷ	318.00 ಲಕ್ಷ
3.	ಸ್ಯಾಂಕಿ ಕೆರೆ	400.00 ಲಕ್ಷ	387.00 ಲಕ್ಷ

ಅಂದಾಜು ವೆಚ್ಚದಲ್ಲಿ ಯಾವುದೇ ಬದಲಾವಣೆಯನ್ನು ಮಾಡಿರುವುದಿಲ್ಲ.

ಅನುಬಂಧ

ಕೆರೆಯಿಂದ ಹೂಳನ್ನು ತೆಗೆಯುವ ಜೊತೆಗೆ ಇತರೆ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ:

1. ಅಲಸೂರು ಕೆರೆ:

1. ಕೆರೆಗೆ ಬರುವ ಘನ ತ್ಯಾಜ್ಯ ವಸ್ತುಗಳನ್ನು ಮತ್ತು ಹೂಳನ್ನು ತಡೆಗಟ್ಟಲು ಸಿಲ್ಟ್ ಟ್ರ್ಯಾಪ್ ಮತ್ತು ಸ್ಕ್ರೀನ್ ಬ್ಯಾರಿಯರ್‌ಗಳನ್ನು ಅಳವಡಿಸುವುದು.
2. ಕೆರೆಗೆ ಬರುವ ಒಳಚರಂಡಿ ಕೊಳಚೆ ನೀರನ್ನು ತಡೆಗಟ್ಟುವುದು. (ಬೆಂಗಳೂರು ನೀರು ಸರಬರಾಜು ಮಂಡಳಿ ವತಿಯಿಂದ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಕಾಮಗಾರಿಯು ಮುಕ್ತಾಯ ಹಂತದಲ್ಲಿದೆ).
3. ಕೆರೆಗೆ ಹರಿದು ಬರುವ ಕೊಳಚೆ ನೀರನ್ನು ಪ್ರತ್ಯೇಕಿಸಲು ನಾಲೆಯನ್ನು ನಿರ್ಮಿಸುವುದು.
4. ಸೆಡಿಮೆಂಟೇಷನ್ ಟ್ಯಾಂಕ್‌ನ್ನು ನಿರ್ಮಿಸುವುದು.

2. ಯಡಿಯೂರು ಕೆರೆ:

1. ಕೆರೆಯ ಸುತ್ತಲೂ ವಿಹಾರಿ ಮಾರ್ಗವನ್ನು ನಿರ್ಮಿಸುವುದು. (ಜಾಗಿಂಗ್ ಟ್ರಾಕ್)
2. ಗಣೇಶ ವಿಗ್ರಹವನ್ನು ವಿಸರ್ಜನೆ ಮಾಡಲು ಟ್ಯಾಂಕ್‌ನ್ನು ಕಟ್ಟುವುದು.
3. ದೋಣಿ ವಿಹಾರ ನಿಲ್ದಾಣವನ್ನು ನಿರ್ಮಿಸುವುದು,
4. ವಾಹನ ನಿಲುಗಡೆ ಸ್ಥಳವನ್ನು ಅಭಿವೃದ್ಧಿಪಡಿಸುವುದು,
5. ಪಾದಚಾರಿ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು,
6. ಕೆರೆಯ ಮಧ್ಯ ಭಾಗದಲ್ಲಿ ಪಕ್ಷಿಗಳ ಆಕರ್ಷಣೆಗಾಗಿ ಒಂದು ದ್ವೀಪವನ್ನು ನಿರ್ಮಿಸುವುದು,
7. ಕೆರೆಯ ಕನಕಪುರ ರಸ್ತೆಯ ಭಾಗಕ್ಕೆ ಬೇಲಿಯನ್ನು ಮತ್ತು ಗ್ರಿಲ್ ನಿರ್ಮಿಸುವುದು,
8. ಕೋಡಿಯನ್ನು ಅಭಿವೃದ್ಧಿಪಡಿಸುವುದು,
9. ಜಯನಗರ ಪ್ರದೇಶದಿಂದ ಬಂದು ಸೇರುವ ಸುಮಾರು 250.00 ಮೀಟರು ಉದ್ದದ ಮಳೆ ನೀರಿನ ಚರಂಡಿಗೆ 2 1.5 ಮೀ. ಆರ್.ಸಿ.ಸಿ. ಬಾಕ್ಸ್‌ನ್ನು ಒದಗಿಸುವುದು.

3. ಸ್ಯಾಂಕಿ ಕೆರೆ:

1. ಕೆರೆಗೆ ಬರುವ ಘನ ತ್ಯಾಜ್ಯ ವಸ್ತುಗಳನ್ನು ಮತ್ತು ಹೂಳನ್ನು ತಡೆಯಲು ಸಿಲ್ಟ್ ಟ್ರಾಪ್ ಮತ್ತು ಸ್ಕ್ರೀನ್ ಬ್ಯಾರಿಯರ್‌ನ್ನು ಅಳವಡಿಸುವುದು.
2. ಕೆರೆಯ ಸುತ್ತಲೂ ಸಣ್ಣ ಏರಿಯನ್ನು ನಿರ್ಮಿಸುವುದು,
3. ಗಣೇಶ ವಿಗ್ರಹ ವಿಸರ್ಜನೆ ಮಾಡಲು ತೊಟ್ಟಿ ಕಟ್ಟುವುದು,
4. ದೋಣಿ ವಿಹಾರ ನಿಲ್ದಾಣವನ್ನು ನಿರ್ಮಿಸುವುದು,
5. ಹಾಲಿ ಇರುವ ಉದ್ಯಾನವನ್ನು ಅಭಿವೃದ್ಧಿಪಡಿಸುವುದು,
6. ಕೆರೆಯ ಮಧ್ಯ ಭಾಗದಲ್ಲಿ ಪಕ್ಷಿಗಳ ಆಕರ್ಷಣೆಗಾಗಿ ಮೂರು ದ್ವೀಪಗಳನ್ನು ನಿರ್ಮಿಸುವುದು,
7. ಕೆರೆಯ ಸುತ್ತ ಬೇಲಿಯನ್ನು ನಿರ್ಮಿಸುವುದು,
8. ವಿದ್ಯುತ್ ದೀಪಾಲಂಕಾರ ಮಾಡುವುದು, ಇತ್ಯಾದಿ.

ಸ್ಯಾಂಕಿ ಕೆರೆಯಿಂದ ಹೂಳೆತ್ತುವ ಕಾಮಗಾರಿ ಪೂರ್ಣಗೊಂಡಿದ್ದು, ಯಡಿಯೂರು ಕೆರೆಯಲ್ಲಿ ಸುಮಾರು ಶೇ. 75 ರಷ್ಟು ಕಾಮಗಾರಿ ಮುಗಿದಿದ್ದು, ಅಲಸೂರು ಕೆರೆಯಲ್ಲಿ ಹೂಳೆತ್ತುವ ಕಾಮಗಾರಿ ಮುಗಿಯುವ ಹಂತದಲ್ಲಿರುತ್ತದೆ.

ಶ್ರೀ ಪಿ.ಸಿ. ಮೋಹನ್ : ಮಾನ್ಯ ಅಧ್ಯಕ್ಷರೇ, ಕೆರಗ್ರಿ ಯೋಜನೆಯಲ್ಲಿ ಬೆಂಗಳೂರು ನಗರದಲ್ಲಿ ಕೆರೆಗಳ ಅಭಿವೃದ್ಧಿ ಯೋಜನೆ ವಿವರಗಳು ಏನು? ಎಂದು ಕೇಳಿದ್ದೇನೆ, ಅದಕ್ಕೆ ಮೂರು ಕೆರೆಗಳು ಅವು ಅಲಸೂರು ಕೆರೆ ಯಡಿಯೂರು ಕೆರೆ, ಮತ್ತು ಸ್ಯಾಂಕಿ ಕೆರೆ ಎಂದು ಮಾಹಿತಿ ಕೊಟ್ಟಿದ್ದಾರೆ, ಈ ಯೋಜನೆಗೆ ಮಾಡಿರುವಂತಹ ವೆಚ್ಚವನ್ನು ತಿಳಿಸಲಾಗಿದೆ, ಆದರೆ ಇದರ ಕಾರ್ಯ ಪ್ರಗತಿಗಳೇನು ಎಂಬ ಮಾಹಿತಿಯನ್ನು ಒದಗಿಸಿಲ್ಲ, ಈ ಕೆರೆಸಿರಿ ಯೋಜನೆಯಲ್ಲಿ ಎಷ್ಟು ಕ್ಯೂಬಿಕ್ ಮೀಟರ್ ಹೂಳನ್ನು ಎತ್ತುತ್ತಾರೆ ಎಂಬ ಬಗ್ಗೆಯೂ ಸಹ ಮಾಹಿತಿಯನ್ನು ಕೊಟ್ಟಿಲ್ಲ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಮೂರು ಕೆರೆಗಳು ಒಟ್ಟಿಗೆ ಸೇರಿದರೆ 5 ಲಕ್ಷ ಕ್ಯೂಬಿಕ್ ಮೀಟರ್‌ನಷ್ಟು ಆಗುತ್ತದೆ.

ಶ್ರೀ ಪಿ.ಸಿ. ಮೋಹನ್ : ಮಾನ್ಯ ಅಧ್ಯಕ್ಷರೇ, ಈ 5 ಲಕ್ಷ ಕ್ಯೂಬಿಕ್ ಮೀಟರ್ ಹೂಳನ್ನು ಎತ್ತಬೇಕೆಂದರೆ, ಸುಮಾರು ಒಂದು ಲಾರಿಗೆ 10 ಕ್ಯೂಬಿಕ್ ಮೀಟರ್ ಎಂದು ಆದರೂ, ಪ್ರತಿದಿವಸ 200 ಕ್ಯೂಬಿಕ್ ಮೀಟರ್ ಹೋಗುತ್ತಿದೆ, ಇದು 200 ಕ್ಯೂಬಿಕ್ ಮೀಟರ್ ಅಂದರೆ ಒಂದು ತಿಂಗಳಿಗೆ 60,000 ಕ್ಯೂಬಿಕ್ ಮಿಟರ್ ಗಳಾಗುತ್ತದೆ. ಈ ಮೂರು ತಿಂಗಳುಗಳಲ್ಲಿ ಎತ್ತಿರತಕ್ಕ ಹೂಳು ಒಂದು ಲಕ್ಷದ ಎರಭತ್ತು ಸಾವಿರ ಕ್ಯೂಬಿಕ್ ಮೀಟರ್‌ಗಳೆಂದು ನಾನು ಹೇಳಲಿಚ್ಛಿಸುತ್ತೇನೆ. ಇನ್ನು ಉಳಿದಂಥಾದ್ದು ಎತ್ತಿಲ್ಲವೆಂಬುದು ನನ್ನ ಅನಿಸಿಕೆ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ, ಅನಿಸಿಕೆಗೆ ಆಧಾರವಿಲ್ಲ.

ಸೇಡಂ ಪುರಸಭೆಯ ವಾರ್ಡ್ ನಂ. 4 ರಲ್ಲಿ ಕಾಮಗಾರಿಗಳ ಬಾಕಿ ಬಿಲ್ ಪಾವತಿಸದಿರುವ ಬಗ್ಗೆ

588 (5025) : ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಪುರಸಭೆಯ ವಾರ್ಡ್ ನಂ.4 ರಲ್ಲಿ ಒಳಚರಂಡಿ ಹಾಗೂ ಸಿಸಿ ರಸ್ತೆ ಮತ್ತು ಪುರಸಭೆಯ ಮುಂದಿರುವ ಮಳಿಗೆಗಳು ಪೂರ್ತಿಯಾದರೂ ಸಹ ಬಿಲ್ ಹಣ ಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಕಾಮಗಾರಿಗಳು ಯಾವ ಶೀರ್ಷಿಕೆಯಡಿಯಲ್ಲಿ ಹಾಗೂ ಯಾವಾಗ ಮಂಜೂರಾಗಿದೆ; ಹಾಗೂ ಪೂರ್ತಿಯಾಗಿರುವುದು ಯಾವಾಗ;

ಇ) ಈ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು; ಒಂದೊಂದು ಕಾಮಗಾರಿಯ ಪ್ರತ್ಯೇಕ ವಿವರ ನೀಡುವುದು; ಇಲ್ಲಿಯವರೆವಿಗೂ ನೀಡಿರುವ ಹಣ ಎಷ್ಟು; ಬಾಕಿ ಇರುವ ಹಣ ಎಷ್ಟು;

ಈ) ಕಾಮಗಾರಿಗಳು ಪೂರ್ತಿಯಾದರೂ ಸಹ ಗುತ್ತಿಗೆದಾರರಿಗೆ ಬಾಕಿ ಇರುವ ಹಣ ಪಾವತಿಸದಿರಲು ಕಾರಣವೇನು; ಈ ಹಣ ಗುತ್ತಿಗೆದಾರರಿಗೆ ಪಾವತಿಸುವುದು ಯಾವಾಗ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ಸಚಿವರು):

ಅ) ಹೌದು.

ಆ) 1) ವಾರ್ಡ್ ನಂ.4 ರಲ್ಲಿ ಚರಂಡಿ ಹಾಗೂ ಸಿ.ಸಿ. ರಸ್ತೆ ಕೆಲಸಗಳನ್ನು ಪುರಸಭೆ ನಿಧಿಯಿಂದ ಕೈಗೊಳ್ಳಲಾಗಿದೆ. ಕೆಲಸದ ಆದೇಶಕ್ಕೆ ದಿನಾಂಕ: 7.4.2003 ದಂದು ಮಂಜೂರಾತಿ ನೀಡಲಾಗಿದೆ. ಈ ಕೆಲಸ ಪೂರ್ತಿಯಾಗಿ 3 ತಿಂಗಳುಗಳಾಗಿವೆ.

2) 10ನೇ ಹಣಕಾಸು ಯೋಜನೆಯಡಿಯಲ್ಲಿ 22 ಮಳಿಗೆಗಳ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಈ ಕೆಲಸಕ್ಕೆ ದಿನಾಂಕ: 4.9.2000 ದಂದು ಮಂಜೂರಾತಿ ನೀಡಲಾಗಿದ್ದು, ಕಳೆದ ವರ್ಷ ಪೂರ್ಣಗೊಂಡಿದೆ.

ಇ) ಈ ಕಾಮಗಾರಿಗಳ ಅಂದಾಜು ವೆಚ್ಚದ ವಿವರ ಈ ಕೆಳಕಂಡಂತಿದೆ: